# ಹೊಸಹಳ್ಳಿ ವಾರ್ಡ್ ಸಂಖ್ಯೆ: 124 ರ ವಾರ್ಡ್ ಸಮಿತಿ ಸಭೆ ನಡವಳಿಗಳು

ಶ್ರೀ.ರಾಮಕೃಷ್ಣ (ಜೆ.ಸಿ ಬೊಮ್ಮನಹಳ್ಳಿ) ನೋಡಲ್ ಅಧಿಕಾರಿ ಯರವರ ಘನ ಅಧ್ಯಕ್ಷತೆಯಲ್ಲಿ ದಿ: 19.12.2020 ರಂದು ವಾರ್ಡ್ ಸಂಖ್ಯೆ: 124 ರ ಸಮಿತಿ ಸಭೆಯನ್ನು ನಡೆಸಲಾಯಿತು. ಸಮಿತಿಗೆ ಕೆಳಕಂಡ ಸದಸ್ಯರು ಹಾಜರಿರುತ್ತಾರೆ.

## ಹಾಜರಿದ್ದ ಅಧಿಕಾರಿಗಳು

| ಕ್ರಸಂ | ಹೆಸರು | ಹುದ್ದೆ |
|---|---|---|
| 1. | ಶ್ರೀ. ರಾಮಕೃಷ್ಣ ಅದ್ಯಕ್ಷರು ನೋಡಲ್ ಅಧಿಕಾರಿ | ಅದ್ಯಕ್ಷರು. |
| 2. | ಶ್ರೀ. ಬಿ.ಸಿ. ಶಿವಣ್ಣ ಸ.ಅ | ಕಾರ್ಯದರ್ಶಿ. |
| 3. | ಶ್ರೀ. ದೊಡ್ಡವೀರಯ್ಯ. (BWSSB) | ಸದಸ್ಯರು. |
| 4. | ಶ್ರೀ. ಶ್ರೀಜೇಶ್ (ಆರೋಗ್ಯ ಪರಿವೀಕ್ಷರು) | ಸದಸ್ಯರು. |
| 5. | ಶ್ರೀ. ತಿಮ್ಮಪ್ಪ ತೋಟಗಾರಿಕೆ ಇಲಾಖೆ | ಸದಸ್ಯರು. |
| 6. | ಶ್ರೀ. ಉಮಾಪತಿ ಬಿ.ಬಿ.ಎಂ.ಪಿ | ಸದಸ್ಯರು. |
| 7. | ಶ್ರೀ. ಪ್ರಕಾಶ (SWM Supervisor) | ಸದಸ್ಯರು. |
| 8. | ಶ್ರೀ. ದಯಾನಂದ ಮೇಸ್ತ್ರಿ SWM | ಸದಸ್ಯರು. |
| 9. | ಶ್ರೀ. ರಾಮಯ್ಯ ಮೇಸ್ತ್ರಿ SWM | ಸದಸ್ಯರು. |
| 10. | ಶ್ರೀ. ಲೋಕೇಶ್ (ಗುತ್ತಿಗೆದಾರರು) | ಸದಸ್ಯರು. |
| 11. | ಶ್ರೀ. ರಾಮು (ಗುತ್ತಿಗೆದಾರರು) | ಸದಸ್ಯರು. |

ದಿನಾಂಕ: 19.12.2020 ರಂದು ಬೆಳಗ್ಗೆ 10.30 ಘಂಟೆಗೆ ಸಭೆಯು ಪ್ರಾರಂಭವಾಯಿತು ಸಭೆಯಲ್ಲಿ ಸಮಿತಿಯ ಅದ್ಯಕ್ಷರಾದ ಶ್ರೀ.ರಾಮಕೃಷ್ಣ (ಜೆ.ಸಿ ಬೊಮ್ಮನಹಳ್ಳಿ) ನೋಡಲ್ ಅಧಿಕಾರಿ ರವರು ಹಾಗೂ ಸಮಿತಿ ಸದಸ್ಯರು ಹಾಜರಾಗಿರುತ್ತಾರೆ.

ಶ್ರೀ.ರಾಮಕೃಷ್ಣ (ಜೆ.ಸಿ ಬೊಮ್ಮನಹಳ್ಳಿ) ರವರ ಅಧ್ಯಕ್ಷತೆಯಲ್ಲಿ ವಾರ್ಡಿನ ಕಾರ್ಯದರ್ಶಿಗಳಾದ ಶ್ರೀ.ಬಿ.ಸಿ.ಶಿವಣ್ಣ ರವರು ಅಧ್ಯಕ್ಷರನ್ನೂ ಹಾಗೂ ಹಾಜರಿದ್ದ ಸದಸ್ಯರನ್ನು ಮತ್ತು ಸಿಬ್ಬಂದಿ ವರ್ಗದವರನ್ನೂ ಸ್ವಾಗತಿಸಿದರು.

ಹಿಂದಿನ ಸಭೆಯ ನಡವಳಿಗಳ ಅಂಶಗಳನ್ನು ಚರ್ಚಿಸಿ ಪಾಲನೆಯಾಗದ ಕಾಮಗಾರಿಗಳ/ದುರಸ್ಥಿಯನ್ನು ಮುಂದುವರೆಸಲು ಅಧ್ಯಕ್ಷರು ಸಭೆಗೆ ಸೂಚಿಸಿದರು.

1. ರಸ್ತೆಯ ಡಾಂಬರು ಕಾಮಗಾರಿಯ ಬಗ್ಗೆ ಚರ್ಚಿಸಿ ಗುತ್ತಿಗೆದಾರಾದ ಶ್ರೀ.ಚಂದ್ರನಾಯ್ಕ ರವರಿಗೆ ದೂರವಾಣಿ ಮೂಲಕ ತಿಳಿಸಲಾಗಿ ಅತಿ ಶೀಘ್ರದಲ್ಲಿ ಕಾಮಗಾರಿಯನ್ನು ದಿ:23.12.2020 ಬುಧವಾರದಂದು ಕಾಮಗಾರಿಯನ್ನು ಪಾರಂಭಿಸುವುದಾಗಿ ತಿಳಿಸಿ ಮಾಹಿತಿಯನ್ನು ಸಭೆಗೆ ಕಾರ್ಯದರ್ಶಿ ರವರು ತಿಳಿಸಿದರು.
2. ಪಾದರಾಯನ ಪುರ ಮುಖ್ಯರಸ್ತೆಯಲ್ಲಿ ಎರಡು ಬದಿಯಲ್ಲಿ Debris ತೆರವುಗೊಳಿಸಲು ಸೂಚಿಸಿರುತ್ತಾರೆ.
3. ಟಿಲಿಕಾಂ ಬಡವಾಣೆಯ ಪಕ್ಕದಲ್ಲಿ ಇರುವ ಸೇತುವೆಯ ಮೇಲೆ ಕಾರು, ಲಾರಿ ಮುಂತಾದ ವಾಹನಗಳನ್ನು ನಿಲುಗಡೆಮಾಡಿದ್ದು, ಅದನ್ನು ತೆರವುಗೊಳಿಸಲು Traffic Police ರವರಿಗೆ ತಿಳಿಸಲು ಸೂಚಿಸಿರುತ್ತಾರೆ.
4. 4ನೇ ಮುಖ್ಯರಸ್ತೆಯಲ್ಲಿ ಕುಡಿಯುವ ನೀರು ಸರಾಗವಾಗಿ ಬರದೆ ತೊಂದರೆಯಾಗಿರುವುದನ್ನು ಅತಿ ಶೀಘ್ರವಾಗಿ ಸರಿ ಪಡಿಸಿಕೊಡಬೇಕೆಂದು ಅಧ್ಯಕ್ಷರು ಸ.ಅ (BWSSB) ರವರಿಗೆ ಸೂಚಿಸಿದರು.
5. ಮುಖ್ಯ ಕೊಳವೆಗಳನ್ನು ಹಾಗೂ ನೀರಿನ ಕೊಳವೆಗಳನ್ನು ಸಮರ್ಪಕವಾಗಿ ನಿರ್ವಹಿಸಲು ಅಧ್ಯಕ್ಷರುಸೂಚಿಸಿದರು. ಪ್ರತಿದಿನ ರಾತ್ರಿ 2.00 ಗಂಟೆಗೆ ಬಿಡುತ್ತಿರುವ ನೀರನ್ನು ಇನ್ನು ಮುಂದೆ 8.00 ರಿಂದ 9.00 ಗಂಟೆಯ ಒಳಗೆ ಬಿಡಲು ಅಧ್ಯಕ್ಷರು ಸೂಚಿಸಿದರು. (ಈಗ ಸರಿಪಡಿಸಲಾಗಿದೆ)

6. ಕೋವಿಡ್-19 Testing ಬಗ್ಗೆ ಚರ್ಚಿಸಲಾಯಿತು. ಶ್ರೀ.ಶ್ರೀಜೇಶ್ (ಆ.ಪ) ರವರು ಕೋವಿಡ್-19 Testing ಬಗ್ಗೆ ವಿವರಿಸಿದರು. + Case ಗಳು ಕಡಿಮೆಯಾದುತ್ತಿರುವುದಾಗಿ ತಿಳಿಸಿದರು.
7. ಶ್ರೀ.ಚಂದ್ರನಾಯ್ಕ ರವರು ಉಳಿಗೆ ಕಾಮಗಾರಿಯನ್ನು ಶೀಘ್ರದಲ್ಲಿ ಮುಗಿಸುವುದಾಗಿ ಸ.ಅ ರವರಿಗೆ ತಿಳಿಸಿರುತ್ತಾರೆ.
8. ಕೋವಿಡ್-19 ನಲ್ಲಿ ಕೆಲಸ ಮಾಡಿದ ಗುತ್ತಿಗೆದಾರರಾದ ಶ್ರೀ. ಶ್ರೀನಿವಾಸ್ ರವರ ಮಗ ಶ್ರೀ.ರಾಮು ರವರು ಕಾರ್ಯನಿರ್ವಹಿಸಿದ ಬಿಲ್‌ಗಳನ್ನು ಬೇಗ ಬಿಡುಗಡೆ ಮಾಡಲು ಕೇಳಿಕೊಂಡಿರುತ್ತಾರೆ.
9. ವಾರ್ಡ್ ಸಂಖ್ಯೆ: 124 ರಲ್ಲಿ Silt & Tractor ಅವಧಿ ಮುಗಿದಿದ್ದು ಹೊಸ ಟೆಂಡರ್ ಶೀಘ್ರದಲ್ಲಿ ಕರೆಯಲಾಗುವುದುದಾಗಿ ಸಭೆಗೆ ತಿಳಿಸಿದರು.

ಮೇಲೆ ಸೂಚಿಸಿರುವ ಎಲ್ಲಾ ಆದೇಶಗಳನ್ನು ಪಾಲಿಸಿ ವರದಿಯನ್ನು ಸಲ್ಲಿಸುವುದಾಗಿ ಕಾರ್ಯದರ್ಶಿ ರವರು ತಿಳಿಸಿದರು.
ವಂದನಾರ್ಪಣೆಯನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಬೆಂಗಳೂರು.
ದಿ: 19.12.2020

ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರು
ವಾರ್ಡ್ ಸಂ: 124.

19/12/2020